ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 392/2017
ಡಿ.ಡಬ್ಲ್ಯೂ : 1

ದಿನಾಂಕ: 26-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರವಾಗಿ ಶ್ರೀ ಎಮ್ .ಜೆ ಎಸ್.ಯವರಿಂದ

1. ಬಿ.ಬಿ ಫಾತಿಮಾ ಮತ್ತು ಶಫಿಯಾರವರು ಅವರ ಅವರ ಮನೆಯಲ್ಲಿ ವಾಸವಿರುತ್ತಾರೆ. ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಅವರಿಬ್ಬರೂ ದಿನಾಂಕ 01-03-1974 ರ ಪೂರ್ವದಲ್ಲಿ ಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ಈ ಪ್ರಕರಣದಲ್ಲಿ ಪಕೀರ್ ರವರು ಏನು ಸಾಧನೆ ಮಾಡುತ್ತಿದ್ದಾರೆ ಎಂದು ಗೊತ್ತಿರುವುದಿಲ್ಲ. ಅವರು ನಮ್ಮ ಚಿಕ್ಕಪ್ಪ ಅಂತ ಗೊತ್ತಿರುತ್ತದೆ, ಬೇರೆ ಏನು ಗೊತ್ತಿರುವುದಿಲ್ಲ.

2. ದಾವಾ ಆಸ್ತಿಗಳು ದಿನಾಂಕ 01-03-1974 ರಲ್ಲಿ ಮತ್ತು ನಿಕಟ ಪೂರ್ವದಲ್ಲಿ ಗೇಣಿ ಆಸ್ತಿಗಳಾಗಿದ್ದವು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶೇಖ್ ಬ್ಯಾರಿಯವರು ದಿನಾಂಕ 01-03-1974 ರಲ್ಲಿ ಮತ್ತು ನಿಕಟ ಪೂರ್ವದಲ್ಲಿ ದಾವಾ ಆಸ್ತಿಯಲ್ಲಿ ಗೇಣಿದಾರರು ಆಗಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ಆಸ್ತಿಯನ್ನು ಚಾಲುಗೇಣಿಯ ಆಧಾರದ ಮೇಲೆ ಅನುಭವಿಸಿಕೊಂಡಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ದಿನಾಂಕ 01-03-1974 ರ ಪೂರ್ವದಲ್ಲಿ ದಣಿಗಳಿಗೂ ಹಾಗೂ ಶೇಖ್ ಬ್ಯಾರಿಗಳಿಗೂ ಚಾಲುಗೇಣಿ ಎದುರುನುಡಿ ಆಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಎದುರುನುಡಿ ಮೌಖಿಕವಾಗಿತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಿನಾಂಕ 01-03-1974 ರಲ್ಲಿ ಮತ್ತು ನಿಕಟ ಪೂರ್ವದಲ್ಲಿ ಶೇಖ್ ಬ್ಯಾರಿಯವರು ಹಾಗೂ ಅವರ ಹೆಂಡತಿ ಪಾತಿಮಾ ಮಕ್ಕಳೊಂದಿಗೆ ಚಾಲುಗೇಣಿಯೊಂದಿಗೆ ಅನುಭವಿಸಿಕೊಂಡು ಬಂದಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ಗೇಣಿಗೆ ಪಡೆದುಕೊಂಡ ನಂತರ ಮನೆಯನ್ನು ಕಟ್ಟಿಕೊಂಡು ತೆಂಗಿನ ತೋಟ ಮಾಡಿಕೊಂಡು ಬೇಸಾಯ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1972 ರ ಇಸವಿಯಲ್ಲಿ ಶೇಖ್ ಬ್ಯಾರಿಯವರು ಪಾಶ್ವವಾಯು ಆದ ಬಗ್ಗೆ ಗೊತ್ತಿರುತ್ತದಾ ಎಂದರೆ ಸಾಕ್ಷಿ ಅವರು ನಮ್ಮ ಮನೆಗೆ ಬಂದು ಹೋಗುತ್ತಿದ್ದರು, ಆ ರೀತಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಅವರು 1977 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಅವರು ಮೃತ ಪಡುವ ಸಮಯದಲ್ಲಿ ನಮ್ಮ ಮನೆಯಲ್ಲಿ ಇದ್ದರು. ಅವರಿಗೆ ಯಾವುದೇ ಕಾಯಿಲೆ ಇರಲಿಲ್ಲ. ವೃದ್ಯಾಪ್ಯದಿಂದ ಮೃತ ಪಟ್ಟಿರುತ್ತಾರೆ.

5. 1977 ರಲ್ಲಿ ಅವರು ಮೃತ ಪಡುವಾಗ ನಮ್ಮ ಮನೆಯಲ್ಲಿ ಇದ್ದ ಬಗ್ಗೆ ದಾಖಲೆಗಳು ಇರುವುದಿಲ್ಲ. ಅವರ ಮರಣ ದಾಖಲೆ ಪತ್ರವನ್ನು ನಾನು ನೋಡಿರುವುದಿಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ನಮೂನೆ 7 ರ ಅರ್ಜಿ ಸಲ್ಲಿಸಿದ್ದು ಯಾರು ಎಂದರೆ ಸಾಕ್ಷಿ ನಮ್ಮ ತಂದೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅರ್ಜಿಯನ್ನು ನಾನು ನೋಡಿರುವುದಿಲ್ಲ. ಘೋಷಣ ಅರ್ಜಿಯನ್ನು ನಿ.ಪಿ.5 ರಂತೆ ಇಲ್ಲಿ ಹಾಜರು ಪಡಿಸಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ಕರ್ನಾಟಕ ಭೂ ಸುಧಾರಣೆ ಖಾಯಿದೆ ಜಾರಿ ಬಂದ ನಂತರ ದಾವಾ ಆಸ್ತಿಗಳಿಗೆ ಶೇಖ್ ಬ್ಯಾರಿಯವರ ಮಕ್ಕಳಲ್ಲಿ ಅಬ್ದುಲ್ ಖಾದರ್ ಬಿಟ್ಟು ಬೇರೆ ಯಾರು ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಆಗ ಮನೆಯಲ್ಲಿ ಬೇರೆ ಯಾರು ಇರಲಿಲ್ಲ, ನಾವು ಮಾತ್ರ ಇದ್ದೇವು ಎಂದು ನುಡಿಯುತ್ತಾರೆ. ಶೇಖ್ ಬ್ಯಾರಿಯವರ ಮಕ್ಕಳದಲ್ಲಿ ಹಿರಿಯವರು 1 ನೇ ಪ್ರತಿವಾದಿ ಅಬ್ದುಲ್ ಖಾದರ್. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ನಮ್ಮ ತಂದೆ ಯಜಮಾನರಾಗಿದ್ದರು.

7. ಡಿಕ್ಲರೇಶನ್ ಕಾನೂನು ಬರುವ ಪೂರ್ವದಲ್ಲಿ ದಾವಾ ಆಸ್ತಿಗಳು ಎಷ್ಟು ವರ್ಷದಿಂದ ಚಾಲುಗೇಣಿ ಹಕ್ಕಿನಲ್ಲಿ ಇದ್ದವು ಎಂದು ನನಗೆ ಗೊತ್ತಿರುವುದಿಲ್ಲ. ಆಸ್ತಿಗಳನ್ನು ಗೇಣಿ ನೆಲೆಯಲ್ಲಿ ಬಾಡಿಗೆ ಪಡೆಯುವಾಗ ಪಕೀರ್ ಬ್ಯಾರಿ, ಅಬ್ದುಲ್ ಖಾದರ್ ಹಾಗೂ ಉಳಿದ ಶೇಖ್ ಬ್ಯಾರಿಯವರ ಮಕ್ಕಳಿಗೆ ಎಷ್ಟು ಪ್ರಾಯ ಎಂದು ಗೊತ್ತಿರುವುದಿಲ್ಲ. ದಾವಾ ಆಸ್ತಿಗಳನ್ನು ಮೌಖಿಕ ಎದುರುನುಡಿ ಚಾಲುಗೇಣಿ ಪಡೆಯುವಾಗ ಶೇಖ್ ಬ್ಯಾರಿಯವರ ಯಾವ ಮಕ್ಕಳು ಜನಿಸಿರಲಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

8. ಭೂ ನ್ಯಾಯ ಮಂಡಳಿಯವರು ದಾವಾ ಎ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ನೀಡಿದ ತೀರ್ಪನ್ನು ನೋಡಿರುತ್ತೇನೆ. ನಿ.ಪಿ.7 ರ ತೀರ್ಪಿಗೆ ನನ್ನದು ಯಾವುದೇ ತಕರಾರು ಇರುವುದಿಲ್ಲ. ನಿ.ಪಿ.7 ತೀರ್ಪಿನ ವಿರುದ್ಧ ನಾನಾಗಲಿ, ನನ್ನ ತಂದೆಯವರಾಗಲಿ ಮೇಲ್ಮನವಿ ಅಥವಾ ರಿಟ್ ಅರ್ಜಿ ಸಲ್ಲಿಸಿರುವುದಿಲ್ಲ. ನಿ.ಪಿ.5 ನನ್ನ ತಂದೆ ಸಲ್ಲಿಸಿದ ನಮೂನೆ 7 ಅರ್ಜಿಯ ಸಮಯದಲ್ಲಿ ಅವರಿಗೆ ಅಂದಾಜು 40 ವರ್ಷ ಇದ್ದಿರಬಹುದು. ನಿ.ಪಿ.5 ರಲ್ಲಿ ಅವರು 45 ವರ್ಷ ಎಂದು ನಮೂದಿಸಲು ಕಾರಣ ಏನು ಅಂತ ಗೊತ್ತಿರುವುದಿಲ್ಲ. 1977 ರಲ್ಲಿ ಭೂ ನ್ಯಾಯ ಮಂಡಳಿ ಸಮಕ್ಷಮ ದಾವಾ ಆಸ್ತಿಗಳ ಗೇಣಿದಾರಿಕೆ ಕುರಿತು ತನಿಖೆ ಬಂದಾಗ ನನ್ನ ತಂದೆಗೆ 43 ವರ್ಷ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ ,.

8. ಭೂ ನ್ಯಾಯ ಮಂಡಳಿಯ ಮುಂದೆ ನನ್ನ ತಂದೆ ಹೇಳಿಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಭೂ ನ್ಯಾಯ ಮಂಡಳಿಯವರ ಮುಂದೆ ನನ್ನ ತಂದೆ ಸತ್ಯ ಹೇಳಿಕೆ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.7 ರಂತೆ ದಿನಾಂಕ 22-07-1977 ರಂದು ತನಿಖೆಗೆ ಬಂದಾಗ ದಾವಾ ಆಸ್ತಿಗಳು ಮೂಲಗೇಣಿ ಹಾಗೂ ಚಾಲುಗೇಣಿಯಿಂದ ಕಳೆದ 50 ವರ್ಷಗಳಿಂದ ನಮ್ಮ ಅನುಭವದಲ್ಲಿ ಇದೆ ಅಂತ ಹೇಳಿರುವುದು ನನಗೆ ಗೊತ್ತಿರುವುದಿಲ್ಲ.

9. ನಿ.ಪಿ.2 ರಲ್ಲಿ ಒಕ್ಕಣೆಗಳು ಸರಿಯಾ, ತಪ್ಪು ಎಂದು ಶೇಖ್ ಬ್ಯಾರಿ ಯವರ ಮಕ್ಕಳಾದ ನೀವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ತಿಳಿದುಕೊಂಡಿರುವುದಿಲ್ಲ, ಪ್ರಯತ್ನನು ಪಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 22-07-1977 ರ 50 ವರ್ಷಗಳ ಹಿಂದೆ ನನ್ನ ತಂದೆ ಜನಿಸಿರಲಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 01-03-1974 ರ ಪೂರ್ವದಲ್ಲಿ ದಾವಾ ಆಸ್ತಿಗಳ ದಣಿಗಳು ಯಾರು ಅಂತ ಗೊತ್ತಿರುವುದಿಲ್ಲ. 1972 ರ ತನಕ ದಾವಾ ಎ ಶೆಡ್ಯೂಲ್ ಆಸ್ತಿಯ ಆಯಾಯಾ ದಣಿಗಳಿಗೆ ಚಾಲುಗೇಣಿ ಹಾಗೂ ಮೂಲಗೇಣಿ ಶೇಖ್ ಬ್ಯಾರಿಯವರು ಪಾವತಿಸುತ್ತಾ ಬಂದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

10. 1972 ರ ನಂತರ ವಾದಿ, 1 ನೇ ಪ್ರತಿವಾದಿ ಹಾಗೂ ಇತರರು ದಣಿಗಳಿಗೆ ಚಾಲುಗೇಣಿ ಹಾಗೂ ಮೂಲ ಗೇಣಿ ಪಾವತಿಸುತ್ತಾ ಬಂದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಿ.ಪಿ.5 ನಮೂನೆ 7 ನ್ನು 1 ನೇ ಪ್ರತಿವದಿಯವರು ಎಲ್ಲಾ ಜಂಟಿ ಹಕ್ಕುದಾರರ ಪರವಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ಕಾರಣಕ್ಕೆ

ಭೂ ನ್ಯಾಯ ಮಂಡಳಿಯವರು ಎಲ್ಲಾ ಜಂಟಿ ಹಕ್ಕುದಾರರ ಪರವಾಗಿ ತೀರ್ಪು ನೀಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

11. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಕ್ಕೆ ಪೂರಕವಾಗಿ ದಾಖಲೆಗಳನ್ನು ಕೊಟ್ಟಿರುತ್ತೇನೆ. ಬೇರೆ ಯಾವುದೇ ದಾಖಲೆ ಕೊಡುವುದು ಬಾಕಿ ಇರುವುದಿಲ್ಲ. ವಾದಿಯವರು ನಿ.ಪಿ.9 ರಿಂದ ನಿ.ಪಿ.11 ರಂತೆ ಹಾಜರು ಪಡಿಸಿದ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಶೇಖ್ ಬ್ಯಾರಿ ನಮ್ಮ ಅಜ್ಜ. ಅವರ ತಂದೆ ಹೆಸರು ಗೊತ್ತಿರುವುದಿಲ್ಲ. ನಿ.ಪಿ.9 ರಿಂದ ನಿ.ಪಿ.11 ರ ಪಹಣಿ ಪತ್ರಿಕೆಗಳಲ್ಲಿ ಬಾಬ್ತು ಆಸ್ತಿಗಳ ವಾದಿ ಮತ್ತು 1 ನೇ ಪ್ರತಿವಾದಿಯವರ ತಂದೆ ಶೇಖ್ ಬ್ಯಾರಿ ಯವರು ಚಾಲುಗೇಣಿದಾರರು ಎಂದು ಕಂಡು ಬರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರೇ ಆಸ್ತಿಗಳನ್ನು ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೆ ಅಂತ ಕಾಲಂ 12 ರ ನಿ.ಪಿ.9 ರಿಂದ 11 ರಲ್ಲಿ ಕಂಡು ಬರುತ್ತದೆ ಎಂದರೆ ಸಾಕ್ಷಿ ನಮ್ಮ ತಂದೆ ತಾಯಿ ಮಾಡಿಕೊಂಡು ಬಂದಿರುತ್ತಾರೆ ಎಂದು ಕಂಡು ಬರುತ್ತದೆ ಎಂದು ನುಡಿಯುತ್ತಾರೆ.

12. ದಾವಾ ಆಸ್ತಿಗಳನ್ನು ದಿನಾಂಕ 01-03-1974 ಹಾಗೂ ಅದರ ನಿಕಟ ಪೂರ್ವದಲ್ಲಿ ಶೇಖ್ ಬ್ಯಾರಿ ಯವರು ದಾವಾ ಆಸ್ತಿಗಳಿಗೆ ಚಾಲುಗೇಣಿದಾರರು ಹಾಗೂ ವ್ಯವಸಾಯಗಾರರು ಆಗಿದ್ದರು ಎಂದು ನಿ.ಪಿ.9 ರಿಂದ 11 ರಲ್ಲಿ ಕಂಡು ಬರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಯಾವುದೇ ದಾಖಲಾತಿಗಳಲ್ಲಿ ನನ್ನ ತಂದೆ ಅಥವಾ ತಾಯಿ ಚಾಲುಗೇಣಿದಾರರು ಆಗಿದ್ದರು ಎಂದು ಕಂಡು ಬರುತ್ತಿರುವುದಿಲ್ಲ ಎಂದರೆ ಸಾಕ್ಷಿ ಕಂಡು ಬರುತ್ತದೆ, ಆ ಬಗ್ಗೆ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ಆ ದಾಖಲೆಗಳನ್ನು ವಕೀಲರಿಗೆ ಕೊಟ್ಟಿರುತ್ತೇನೆ. ಕೈ ಬರಹದ ಪಹಣಿ ಪತ್ರಿಕೆಗಳನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವಾ ವರ್ಷದ RTC ಎಂದು ಗೊತ್ತಿರುವುದಿಲ್ಲ. ಆ ದಾಖಲೆಗಳನ್ನು ನ್ಯಾಯಲಯಕ್ಕೆ ಹಾಜರು ಪಡಿಸಿರುತ್ತೇನೆ.

13. ನಾನು ಹೇಳಿದಂತೆ ನಮ್ಮ ತಂದೆ ಮತ್ತು ತಾಯಿ ನಾನು ಪ್ರಾಯಕ್ಕೆ ಬರುವ ಪೂರ್ವದಿಂದಲೂ ಅವರು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ, ಈಗ ನನಗೆ 59 ವರ್ಷ ಎಂದು ನುಡಿಯುತ್ತಾರೆ. ದಿನಾಂಕ 01-03-1974 ಕ್ಕೆ ದಾವಾ ಆಸ್ತಿಗಳಲ್ಲಿ ಯಾವುದು ಮೂಲಗೇಣಿ ಯಾವುದು ಚಾಲುಗೇಣಿ ಆಸ್ತಿ ಎಂದು ನನಗೆ ಗೊತ್ತಿರುವುದಿಲ್ಲ. ಮೂಲ ಗೇಣಿ ಆಸ್ತಿಗಳಿಗೆ ನೊಂದಾಯಿತ ದಸ್ತಾವೇಜು ಇರಬೇಕಾಗಿರುತ್ತದೆ ಎಂದರೆ ಸಾಕ್ಷಿ

ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವ ದಾಖಲೆ ಆಧಾರದ ಮೇಲೆ ನಮ್ಮ ತಂದೆ ಚಾಲುಗೇಣಿ ಹಾಗೂ ಮೂಲ ಗೇಣಿ ಆಸ್ತಿ ಪಡೆದಿದ್ದರು ಎಂಬದನ್ನು ತಿಳಿದುಕೊಂಡಿರುವುದಿಲ್ಲ ಹಾಗೂ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ.

14. ನಿ.ಪಿ.7 ರ ತೀರ್ಪಿನ ಪ್ರಕಾರ ನಿ.ಪಿ.6/ಫಾರಂ ನಂಬರ್ 10 ನ್ನು ನನ್ನ ತಂದೆಗೆ ತಹಶೀಲ್ದಾರವರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. ನಿ.ಪಿ.6 ರ ಫಾರಂ ನಂ. 10 ರಂತೆ ನನ್ನ ತಂದೆ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಆ ತೀರ್ಪು ಆಗುವ ಪೂರ್ವದಲ್ಲಿ ಯಾವುದೇ ಕಂದಾಯ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ಇರಲಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

15. ನಿ.ಪಿ.9 ರಿಂದ 11 ರ ದಾಖಲೆಯ ಕಲಂ 11 ಮತ್ತು 12 ರ ಎಂಟ್ರಿಗಳು ಸರಿ ಇಲ್ಲ ಎಂದು ಯಾವ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲ. ನಾನು 1992 ರಿಂದ 2002 ರವರೆಗೆ ಸೌದಿ ಅರೆಬಿಯಾದಲ್ಲಿ ಇದ್ದೆ. ಈ ಪ್ರತಿವಾದಿ 1(ಎ), 1(ಬಿ), 1(ಡಿ) ಯಿಂದ 1(ಎಫ್) ರವರು ಅವರ ಗಂಡನ ಮನೆಯಲ್ಲಿ ವಾಸ ಇರುತ್ತಾರೆ. ಶೇಖ್ ಬ್ಯಾರಿಯವರು ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ವಿಲ್ ನಾಮೆಯನ್ನು ಬರೆಯದೆ ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿ ಅವರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಅವರು ಮೃತರಾಗುವಾಗ ಭೂ ನ್ಯಾಯ ಮಂಡಳಿಯಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ತೀರ್ಪು ಆಗಿರುವುದಿಲ್ಲ ಎಂದರೆ ಸರಿ.

ಈ ಸಂದರ್ಭದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ